"ಖಂಡಿತಾ ಇಲ್ಲ, ಪಿಯೆರಿ!"

"ಆಗಲಿ ಸರ್." ಕಂಪಿಸುವ ದನಿಯಿಂದ ಕಾರ್ಯದರ್ಶಿ ಪಿಸುಗುಟ್ಟಿದ.

"ನಾನು ನಿಮಗೆ ಅವಕಾಶ ಕೊಡಲಿಲ್ಲವೆಂದು ಯಾರೂ ಹೇಳುವುದು ಬೇಡ." ರಿವಾಲ್ವರಿನ ಕುದುರೆಯನ್ನು ಸಜ್ಜುಗೊಳಿಸುತ್ತಾ ಇಗ್ನೇಶಿಯಸ್ ಅಗರ್ಬಿ ಹೇಳಿದ. ಚೇರ್ಮನರ ಹಣೆಯಿಂದ ಧಾರಾಕಾರವಾಗಿ ಬೆವರು ಇಳಿಯಲು ಶುರುವಾಯಿತು. ಕಾರ್ಯದರ್ಶಿ ಮುಖವನ್ನು ಬೇರೆ ಕಡೆಗೆ ತಿರುಗಿಸಿದ. ಅವನು ಎರಡೂ ಕಿವಿಗಳನ್ನು ಗಟ್ಟಿಯಾಗಿ ಬೆರಳುಗಳಿಂದ ಮುಚ್ಚಿಕೊಂಡಿದ್ದ.

"ಸರಿ."

ಅಗರ್ಬಿ ರಿವಾಲ್ವರನ್ನು ತಲೆಯ ಮೇಲಿಂದ ಹೊರತೆಗೆದು ತನ್ನ ಜೇಬಿಗಿಳಿಸಿ ಕುರ್ಚಿಯಲ್ಲಿ ಕುಳಿತುಕೊಂಡ.

ಇಬ್ಬರು ಬ್ಯಾಂಕರುಗಳೂ ದಿಗ್ಮೂಢರಾಗಿ ನಿಂತಲ್ಲಿಯೇ ಕಂಪಿಸುತ್ತಿದ್ದರು.

ಇಗ್ನೇಶಿಯಸ್ ಅಗರ್ಬಿ ತನ್ನ ಹಳೆ ಬ್ರೀಫ್‌ಕೇಸನ್ನು ಮೇಲೆತ್ತಿ ಚೇರ್ಮನರ ಮೇಜಿನ ಮೇಲೆ ಇರಿಸಿ ಸಂಪೂರ್ಣವಾಗಿ ತೆರೆದಿಟ್ಟ.

ಬ್ರೀಫ್‌ಕೇಸಿನೊಳಗೆ ಸ್ವಲ್ಪವೂ ಖಾಲಿ ಜಾಗ ಇಲ್ಲದಂತೆ ನೂರರ ಮುಖಬೆಲೆಯ ಅಮೆರಿಕನ್ ಡಾಲರುಗಳ ಕಟ್ಟುಗಳನ್ನು ಜೋಡಿಸಿಡಲಾಗಿತ್ತು.

ಚೇರ್ಮನರು ಕುತೂಹಲದಿಂದ ಬ್ರೀಫ್‌ಕೇಸಿನ ಒಳಗೆ ಕಣ್ಣಾಡಿಸಿದರು. ಏನಿಲ್ಲವೆಂದರೂ ಅದರೊಳಗೆ ಐದು ಮಿಲಿಯನ್ ಅಮೆರಿಕನ್ ಡಾಲರುಗಳು ಇರಬಹುದೆಂದು ಅವರ ಅನುಭವಿ ಕಣ್ಣುಗಳು ಅಂದಾಜಿಸಿದವು.

"ಈಗ ನಿಮ್ಮ ಬ್ಯಾಂಕಿನಲ್ಲಿ ಖಾತೆ ತೆರೆಯಲು ನನಗೆ ಯಾವುದೇ ಹೆದರಿಕೆ ಇಲ್ಲ! ಏನಂತೀರಾ ಚೇರ್ಮನರೇ?... ಬನ್ನಿ, ಬನ್ನಿ. ಖಾತೆ ತೆರೆಯುವ ಎಲ್ಲಾ ಪ್ರಕ್ರಿಯೆಗಳನ್ನು ಬೇಗ ಬೇಗ ಮುಗಿಸುವ." ಎಂದ ಮುಗುಳ್ನಗುತ್ತಾ.

## ಜೆಫ್ರಿ ಆರ್ಚರ್ (1940)

ಈ ಬ್ರಿಟಿಷ್ ಲೇಖಕ ಬಹುವಿವಾದಾಸ್ಪದ ವ್ಯಕ್ತಿ. ಬರವಣಿಗೆಗೆ ತೊಡಗುವ ಮೊದಲು ಬ್ರಿಟನ್ನಿನ ಸಂಸದರಾಗಿದ್ದರು. ಕನ್ಸರ್ವೇಟಿವ್ ಪಕ್ಷದ ಉಪಾಧ್ಯಕ್ಷರಾಗಿದ್ದರು. ಹಣಕಾಸು ಹಗರಣವೊಂದರಲ್ಲಿ ಸಿಲುಕಿ ನಷ್ಟವನ್ನು ಅನುಭವಿಸಿದರು. ರಾಜಕೀಯದಿಂದ ದೂರ ಸರಿದು ಬರೆಯತೊಡಗಿದರು. ಅವರ ಮೊದಲ ಕಾದಂಬರಿಗಳು 'Not a Penny More not a Penny less', 'Kane and Abel' ತುಂಬಾ ಜನಪ್ರಿಯವಾದವು. ಸುಮಾರು 42 ಪುಸ್ತಕಗಳನ್ನು ಬರೆದಿದ್ದಾರೆ. ಅವರ ಪುಸ್ತಕಗಳು 33 ಭಾಷೆಗಳಿಗೆ ಅನುವಾದಗೊಂಡಿವೆ.

## ಜೆ.ವಿ. ಕಾರ್ಲೊ

ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ 40ಕ್ಕೂ ಹೆಚ್ಚು ಸಣ್ಣಕತೆಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಕನ್ನಡ ಮಾತ್ರವಲ್ಲದೆ, ಕೊಂಕಣಿ ಭಾಷೆಯಲ್ಲಿ ಅವರ 100ಕ್ಕೂ ಹೆಚ್ಚು ಸಣ್ಣಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.